ನಾಯಕತ್ವವನ್ನು ಯಾರು ಮುಂದುವರೆಸಬೇಕು ಎಂಬ ತೀರ್ಮಾನವೂ ಇವುಗಳಲ್ಲಿ ಮೊದಲೇ ನಿರ್ಧಾರ ಆಗಿರುವ ಹಾಗೆ ಕಾಣುತ್ತದೆ.

ನವೆಂಬರ್ ತಿಂಗಳಿಂದ ಫೆಬ್ರುವರಿವರೆಗೆ ಹಕ್ಕಿಗಳ ವಲಸೆ ನಡೆಯುತ್ತದೆ. ನಾನಾ ದೇಶಗಳ ಹಕ್ಕಿಗಳು ತಮ್ಮ ಆಹಾರ ಹುಡುಕಿಕೊಂಡು ಖಂಡಾಂತರಗಳ ದಾಟಿ ಬರುವ ಈ ಪ್ರಕ್ರಿಯೆ ಸಾವಿರಾರು ವರುಷಗಳಿಂದ ಅಭಾದಿತವಾಗಿ ನಡೆದುಕೊಂಡು ಬಂದಿದೆ. ಈ ಸಂಗತಿ ಯೋಚಿಸಿದಷ್ಟೂ ರೋಚಕ ಎನಿಸುತ್ತದೆ. ಇವುಗಳ ಬೌದ್ಧಿಕ ತಿಳಿವಳಿಕೆ, ನೆನಪಿನ ಶಕ್ತಿ, ಇಂತಲ್ಲಿಗೇ ಇದೇ ಸಮಯದಲ್ಲಿ ಬರಬೇಕೆಂಬ ವಿವೇಕವೇ ಅಚ್ಚರಿ ಹುಟ್ಟಿಸುತ್ತದೆ.

ಅಷ್ಟು ಪುಟ್ಟ ಮೆದುಳಿನಲ್ಲಿ ಆಗಲೇ ಗೂಗಲ್ ಮ್ಯಾಪ್ ಪ್ರತಿಷ್ಠಾಪಿಸಿಕೊಂಡಿರುವ ಖಗಗಳ ಕೌಶಲವೇ ಅತ್ಯದ್ಭುತ. ಸ್ಥಳೀಯ ಹಕ್ಕಿಗಳ ಜೊತೆ ಕೊಡುಕೊಳೆ ಮಾಡಿಕೊಂಡು ಬದುಕುವ ವಲಸೆ ಹಕ್ಕಿಗಳಲ್ಲಿ ಸಂಕೋಚ ಮತ್ತು ಭಯ ಸಹಜವಾಗಿಯೇ ಹೆಚ್ಚಾಗಿರುತ್ತದೆ. ಹೊಸ ಜಾಗಕ್ಕೆ ಹೋದಾಗ ಅಂಜಿಕೆ, ಅಭದ್ರತೆಗಳು ನಮ್ಮನ್ನು ಕಾಡುವಂತೆ ಅವಕ್ಕೂ ಆಗುವುದು ಸಹಜವೇನೆ.

ಒಮ್ಮೆ ವಲಸೆ ಬಂದ ಹಕ್ಕಿಗಳಿಗೆ ಆಹಾರದಲ್ಲಿ ವ್ಯತ್ಯಯವಾದರೆ, ಜೀವಭಯ ಉಂಟಾದರೆ, ಪರಿಸರ ಕಲುಷಿತವಾದರೆ, ಅವು ತಮ್ಮ ಆಗಮನ ಸ್ಥಳಗಳನ್ನು ಶಾಶ್ವತವಾಗಿಯೂ ತೊರೆಯುವ ಸಾಧ್ಯತೆಯನ್ನು ಅಲ್ಲಗೆಳೆಯುವಂತಿಲ್ಲ. ಇಷ್ಟೆಲ್ಲದರ ನಡುವೆ ಈ ವಲಸೆ ಹಕ್ಕಿಗಳಿಗೂ ನಮ್ಮ ಸ್ಥಳೀಯ ಪಕ್ಷಿಗಳಿಗೂ ಯಾವುದಾದರೂ ವಿಷಯದಲ್ಲಿ ಭಿನ್ನಾಭಿಪ್ರಾಯ ಬಂದು ಜಗಳ, ದೊಂಬಿ, ಮಾರಾಮಾರಿ, ಕೊನೆಗೆ ಖೂನಿ ಕೂಡ ಆಗುವುದುಂಟು. ನಾನು ಅನೇಕ ಕಡೆ ಇಂತಹ ಸಂಘರ್ಷದ ಸನ್ನಿವೇಶಗಳನ್ನು ಕ್ಲಿಕ್ಕಿಸಿರುವೆ.

ನಾರಾಯಣ ಅವರ ಹಿರಿಯಣ್ಣ ದಾಸ್ ಖಾರ್ವಿ ಕೂಡ ನಮ್ಮೊಂದಿಗೆ ಬಂದಿದ್ದರು. ಈ ನಾಡದೋಣಿ ನಡೆಸಲು ಇಬ್ಬರು ಬೇಕು. ಒಬ್ಬರು ಡ್ರೈವರ್ ಆದರೆ ಮತ್ತೊಬ್ಬರು ಕಂಡಕ್ಟರ್. ಆದರೆ, ಇಬ್ಬರ ಕೈಯಲ್ಲೂ ಉದ್ದಗಳದ ಸ್ಟೇರಿಂಗ್ ಇರಲೇಬೇಕು. ಕೆಲವೊಮ್ಮೆ ನೀರು ತೆಳುವಾದ ಕಡೆ ಮರಳಿನಲ್ಲಿ ದೋಣಿ ಸಿಕ್ಕಿ ಬೀಳುತ್ತಿತ್ತು. ಆಗ ನೀರಲ್ಲಿಳಿದು ನೂಕುವ ಕೆಲಸವನ್ನು ಒಬ್ಬರು ಕಡ್ಡಾಯವಾಗಿ ಮಾಡಲೇಬೇಕಿತ್ತು. ದಾಸ್ ಖಾರ್ವಿ ಮುಗ್ಧ ಜೀವಿ. ಅತೀವ ಕಳಕಳಿಯ ಮನುಷ್ಯ. ನಮಗೆ ಪದೇ ಪದೇ 'ಹೆದರಬೇಡಿ ಸರೂ, ಎಲ್ಲಾ ತೋರಿಸೋಣ. ಚೆಂದಚೆಂದ ತೆಗೀರಿ. ಒಟ್ಟು ನಿಮ್ಮ ಕ್ಯಾಮೆರಾ ಫುಲ್ ಆಗಬೇಕು. ನೀವು ನಮ್ಮ ಗೆಸ್ಟು. ನಿಮ್ಮ ಕಾಳಜಿ ನಾವು ಮಾಡಬೇಕು' ಎಂದು ಚಡಪಡಿಸುತ್ತಿದ್ದರು. ನಡುನಡುವೆ 'ಈ ಗಳ ನೀರಿಗೆ

